Rate Contract Firms. This is because of the scarcity of raw materials experienced by the Manufacturing Firms. However, action has been taken to fix the new Rate Contract for year 1974-75 and it is hoped that the Rate Contract Firms will be able to keep up a steady flow of supplies to the Medical Stores from which supplies to every hospital in the State would be made according to the schedule of programme fixed in this behalf. If the Rate Contract firms fail to make the supplies, instructions have been issued to the Director of Health and Family planning Services, Bangalore to take penal action.

ಶ್ರೀ ಕಾಗೋಡು ತಿಮ್ಮಪ್ಪ.— ತಾವು ಪ್ಯಾಕೇಜ್ ಪಿಪ್ಟಂ ಮುಖಾಂತರ ಇನ್‌ಸ್ಟಿಟ್ಯೂಷನ್ಸ್‌ಗೆ ೨ ಸಾವಿರ, ೩ ಸಾವಿರ ರೂಪಾಯಿಯಷ್ಟು ಔಷಧಿಯನ್ನು ಸರಬರಾಜು ಮಾಡುತ್ತೀರಿ. ನಾನು ತೀರ್ಥಹಳ್ಳಿ, ಸಾಗರ ಆಸ್ಪತ್ರೆಗಳಿಗೆ ಬೇಟಿ ಕೊಟ್ಟಾಗ ಅಲ್ಲಿ ಆ ವರ್ಷದಲ್ಲಿ ಉಪಯೋಗಕ್ಕೆ ಬಾರದೆ ಇರತಕ್ಕ ಸುಮಾರು ೫೦೦, ೧೦೦೦ ರೂಪಾಯಿಗಳ ಮೊಬಲಗಿನ ಔಷಧಿಯನ್ನು ಕಳುಹಿಸಿದ್ದಾರೆ. ಅಲ್ಲಿ ಅವು ಉಪಯೋಗಕ್ಕೆ ಬರುವುದಿಲ್ಲ ಎಂದು ಹೇಳಿದರು. ಈ ರೀತಿ ಅನಾವಶ್ಯಕವಾದ ಔಷಧಿಯನ್ನು ಕಳಿಸುವುದಕ್ಕೆ ಬದಲಾಗಿ ಉಪಯೋಗಕ್ಕೆ ಬರುವ ಔಷಧಿಯನ್ನು ಕಳಿಸಿದರೆ ಜನರಿಗೆ ಸಹಾಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಪ್ಯಾಕೇಜ್ ಪಿಪ್ಟಂನಿಂದ ಔಷಧಿಯನ್ನು ಕಳುಹಿಸಬೇಕಾದರೆ ಮೊದಲು ಡಾಕ್ಟರಿಂದ ಅವರಿಗೆ ಯಾವ ಔಷಧಿಗಳು ಉಗಯೋಗಕ್ಕೆ ಬರುತ್ತವೆ ಎಂದು ತಿಳಿದುಕೊಂಡು ಅವರ ಪ್ರಕಾರ ಪ್ಯಾಕೇಜ್ ಪಿಪ್ಟಂ ಮುಖಾಂತರ ಔಷಧಿ ಕಳುಹಿಸಿದರೆ ಆಗ ಅದರಿಂದ ಹೆಚ್ಚು ಅನುಕೂಲವಾಗುತ್ತದೆ. ಅದುದರಿಂದ ಡ್ರಗ್ಸ್ ರಿಕ್ವೈರ್‌ಮೆಂಟ್ಸ್‌ನ್ನು ಮುಂಚಿತವಾಗಿ ಕೇಳಿಕೊಂಡು ಅವರ ಪ್ರಕಾರ ಔಷಧಿ ಸಪ್ಲೈ ಮಾಡಿದರೆ ಈಗ ಬರತಕ್ಕ ಔಷಧಿ ಕೊರತೆಯು ಕಡಿಮೆಯಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಹಚ್ ಸಿದ್ದವೀರಪ್ಪ.— ಅದೇ ರೀತಿ ಅವರು ಕಳಿಸುತ್ತಾರೆ. ಒಂದೊಂದು ಸಾರಿ ಅವರು ಕೇಳಿದ ಸಾಮಾನುಗಳು ಇಲ್ಲದೇ ಇದ್ದರೆ ಇನ್ನೊಂದು ಸಾಮಾನು ಕಳಿಸಿರುವುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಕೊಣಂದೂರು ಲಿಂಗಪ್ಪ.— ಮೂರು ಮೂಟೆ ಉಪ್ಪನ್ನು ಕಳಿಸಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.— ಅದು ತಪ್ಪು. ಆ ರೀತಿ ಮಾಡಕೂಡುದು. In some places I myself have inspected. ವರ್ಷಗಟ್ಟಲೆ ಪ್ರಯೋಜನ ಇಲ್ಲದೆ ಬಿದ್ದಿರುವ ಕೆಲವು ಔಷಧಿ ಗಳನ್ನು ಇಟ್ಟಿದ್ದಾರೆ. ಅದು ಮಾಮೂಲ್‌ಯಾಗಿ ನಡೆದುಕೊಂಡು ಹೋಗಿದೆ. ಆ ರೀತಿ ಮಾಡ ಕೂಡದು ಎಂದು ನಾನು ಹೇಳಿದ್ದೇನೆ. ಯಾವುದು ಇಂಡೆಂಟ್ ಮಾಡಿದ್ದಾರೆ ಅದನ್ನೇ ಕೊಡಬೇಕು, ಅದು ಇಲ್ಲದಿದರೆ ಇಲ್ಲ ಎಂದು ಹೇಳಬೇಕು. ಅವರು ಕೇಳುವುದು ಒಂದು, ಇವರು ಕಳುಹಿಸುವುದು ಒಂದು ಆಗಬಾರದು. ಆ ರೀತಿ ಮಾಡಿದರೆ action will be taekn ಎಂದು ನಾನು ಸೂಚನೆ ಕೊಟ್ಟಿದ್ದೇನೆ. What the hon. Member says is true in some respects.

(iii) *re.* burnning of currecy notes in Mandargi Taluk

ಶ್ರೀ ಬಿ. ಜಿ ಬಣಕಾರ (ಹಿರೆಕೆರೂರು) — ಮಾನ್ಯ ಅಧ್ಯಕ್ಷರೆ, ಮುಂಡರಗಿಯಲ್ಲಿ ಸುಮಾರು ೧,೮೪,೦೦೦ ನೋಟ್‌ಗಳನ್ನು ಸುಟ್ಟ ಬಗ್ಗೆ ಹಣಕಾಸಿನ ಸಚಿವರು ಗಮನವನ್ನು ಸೆಳೆಯಬಯಸುತ್ತೇನೆ.

SRI M. Y. GHORPADE (Minister for Finance).— Madam Speaker, I state as follows :

Information was received about the lose of currency notes in the fire accident at the Sub-Treasury Mundargi on 2nd August 1974. Immediately, the Director of Treasuries visited the spot and has sent his preliminary report to Government. It is reported that the cash chest was closed at around 7-30 p.m. on 1st August 1974. The

(SRI M. Y. GHORPADE)

closing balance amount was Rs 6,47,100/-. It appears that the electric light went off, at the time of verification of the cash balance. Thereafter, the Shroff sealed the strong room with the help of candle light.

2. It is reported that on 2nd August 1974 at about 10-45 hours, When the Sub-Treasury Officer and Shroff opened the strong room, they found the room full of smoke. The wooden chest containing cash had also been affected by fire. After extinguishing the fire, it was discovered that a sum of Rs. 1,06,600/- had been burnt. Out of this, an amount of Rs. 1,48,700/- is stated to have been burnt to ashes and the remaining amount of Rs. 17,900/- partilly burnt. The partially burnt notes with ashes have been seized by the police. The amount remaining intact in the currency chest was Rs. 4,80,500/-

3. The police authorties are investigating the case and have integrated some witnesses. Appropriate action will be taken by Government after investigation is completed.

ಶ್ರೀ ಬಿ. ಜಿ. ಖಣಕಾರ್.— ಆಗಸ್ಟ್ ಒಂದನೇ ತಾರೀಖು ಸಾಯಂಕಾಲ 7½ ತಾಸಿಗೆ ಕ್ಯಾಷ್ ಚೆಕ್ ಕ್ಲೋಸ್ ಮಾಡಿದ್ದಾರೆ. 7½ ತಾಸಿಗೆ ಕ್ಲೋಸ್ ಮಾಡುವ ಅಗತ್ಯ ಏನಿತ್ತು ? 7½ ತಾಸಿಗೆ ಬೆಂಕಿ ಶುರು ಆಗಿದ್ದರೆ ೧೦-೪೫ಕ್ಕೆ ನೋಡಿದ್ದಾರೆ. ೭-೩೦ ರಿಂದ ೧೦-೪೫ವರೆಗೆ ಸುಡುತ್ತಾ ಇರಲಿಕ್ಕೆ ಹೇಗೆ ಸಾಧ್ಯ ? ಸ್ಟ್ರಾಂಗ್ ರೂಮ್ ಹತ್ತಿರ ಪೋಲೀಸ್ ಸ್ಟೇಷನ್ ಇದೆ. ೧೦-೪೫ವರೆಗೆ ಅಲ್ಲಿಗೆ ಯಾರಾದರೂ ಹೋಗಿ ನೋಡಿಕೊಂಡು ಬಂದಿದ್ದಾರೆಯೋ ಇಲ್ಲವೋ ? ಪೋಲೀಸ್ ಸ್ಟೇಷನ್ ಹತ್ತಿರ ಇರುವುದರಿಂದ ಬೆಂಕಿ ಬಿದ್ದಿರುವುದು ಹೇಗೆ ಗೊತ್ತಾಗಲಿಲ್ಲ ? ಬರೇ ೧,೪೮,೭೦೦ ಮೌಲ್ಯದ ನೋಟು ಸುಟ್ಟಿರೆ ಉಳಿದದ್ದು ಏತಕ್ಕೆ ಸುಡಲಿಲ್ಲ ? ಇಲ್ಲೆ ಇದ್ದ ರೆವಿನ್ಯೂ ಡಿಪಾರ್ಟ್‌ಮೆಂಟಿನ ಷ್ರಾಫ್ ೩ ವರ್ಷದಿಂದ ಇದ್ದಾರೆ. ಅವರ ಮೇಲೆ ಒಂದೂವರೆ ಲಕ್ಷ ರೂಪಾಯಿನ ಬಗ್ಗೆ ಚಾರ್ಜ್ ಇತ್ತೆಂದು ತಿಳಿದು ಬಂದಿದೆ. ಅವರಿಗೆ ವರ್ಗ ಆಗಿತ್ತೆಂದು ಗೊತ್ತಿದೆ. ಹೀಗಿದ್ದಾಗ ಬದ್ದಪೂರ್ವಕವಾಗಿ ಒಂದೂವರೆ ಲಕ್ಷ ಹೊಡೆದಿದ್ದಾರೆ ಎಂದು ತಿಳಿದು ಬಂದಿದೆ. ಇದರ ಬಗ್ಗೆ ಸ್ಟೇಟ್ ಸಿ ಐ.ಡಿಯವರು ಸೂಕ್ತ ಕ್ರಮ ತೆಗೆದುಕೊಂಡಿ ನೋಡುತ್ತಾರೆಯೇ ಹೇಗೆ ?

ಶ್ರೀ ಎಂ. ವೈ ಘೋರ್ಪಡೆ.— ಎಲ್ಲಾ ವಿಷಯಗಳನ್ನು ಪೋಲೀಸರು ತನಿಖೆ ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಾಗಿ ಹೇಳುವುದು ಸರಿಯಲ್ಲ ಪೋಲೀಸ್ ತನಿಖೆ ನಡೆದು ಏನೇನು ಕಾನೂನು ಪ್ರಕಾರ ಕ್ರಮಗಳನ್ನು ಕೈಗೊಳ್ಳಬಹುದೋ ಅದನ್ನು ಖಂಡಿತ ತೆಗೆದುಕೊಳ್ಳುತ್ತಾರೆ. ಅವರಲ್ಲಿ ಸೆಂಟ್ರಲ್ ಸಿ.ಐ.ಡಿ ಅವರ ಸಹಾಯ ಬೇಕು ಎಂದು ಅನ್ನಿಸಿದರೆ ಸಿ.ಐ.ಡಿ ಯವರ ಸಹಾಯ ತೆಗೆದುಕೊಂಡೇ ತೆಗೆದು ಕೊಳ್ಳುತ್ತಾರೆ. ಪೋಲೀಸರು ಸರಿಯಾಗಿ ತನಿಖೆ ಮಾಡುತ್ತಿರುವಾಗ ನಾವು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದು ಅಷ್ಟೊಂದು ಸೂಕ್ತವಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಜಿ. ಖಣಕಾರ್.— ಅಲ್ಲ ಪೋಲೀಸ್ ಸ್ಟೇಷನ್ ಸಮೀಪದಲ್ಲೇ ಇರುವುದರಿಂದ ೨೪ ತಾಸೂ ಪೋಲೀಸ್ ಗಾರ್ಡ್ ಇರುತ್ತದೆ. ನೋಟ್ ಸುಟ್ಟ ವಾಸನೆ ಬರುತ್ತಿತ್ತು ಮತ್ತು ಹೊಗೆ ಕಾಣಿಸುತ್ತಿತ್ತು. ೧೦-೪೫ರಿಂದ ಹೊಗೆ ಏತಕ್ಕೆ ಬರಲಿಲ್ಲ ? ಪೋಲೀಸರಿಂದ ತನಿಖೆ ಮಾಡಿಸಿದರೆ ಯಾವ ಸರಿಯಾದ ನ್ಯಾಯವೂ ಸಿಕ್ಕುವುದಿಲ್ಲ. ಆದುದರಿಂದ ಸೆಂಟ್ರಲ್ ಸಿ.ಐ.ಡಿ ಯವರಿಂದ ಸ್ಪೆಷಲ್ ಆಗಿ ಎನ್‌ಕ್ವೈರಿ ಮಾಡಿಸಿ.

ಶ್ರೀ ಎಂ. ವೈ ಘೋರ್ಪಡೆ.— ನಮಗೆ ಅನುಮಾನ ಇರುವುದರಿಂದ ತನಿಖೆ ಮಾಡುತ್ತೇವೆ. ಸಿ.ಐ.ಡಿ ತನಿಖೆ ಅವಶ್ಯಕತೆ ಇದ್ದರೆ ಖಂಡಿತ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಕೇಳಿದ ಎರಡು ವಿಷಯಗಳ ಬಗ್ಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಒಂದು ಕ್ಲಾರಿಫಿಕೇಷನ್‌ನ್ನು ಮಾನ್ಯ ಮಂತ್ರಿಗಳಿಂದ ಕೇಳ ಬಯಸುತ್ತೇನೆ.

SRI S. M. KRISHNA.—I rise a point of order. Madam Speaker, the hon. Member Sri S. Bangarappa is a very senior Member of the Assembly. He knows that in a call attention notice, any explanation or clarification could be obtained only by the hon. Member who has tabled the Call Attention. So, I am afraid he has no right to seak further clarification.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಕೃಷ್ಣರವರು ಏನು ಹೇಳಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಶ್ರೀ ಬಣಕಾರ್‌ರವರು ಕ್ಲಾರಿಫಿಕೇಷನ್ ಕೇಳಿದರು. That was the property of the House. The hon. Minister concerned has to reply to that clarification. We are concerned about the answer and we are not seeking any explanation or the clarification from the hon. Minister. We are expecting a reply from the hon. Minister regarqing the clarification roised by the hon. Member Sri B. G. Banakar.

ಶ್ರೀ ಎಸ್. ಬಂಗಾರಪ್ಪ.—ಬಹಳ ಗುರುತರವಾದ ವಿಷಯವಾದುದರಿಂದ ಅದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ.

ಫೈನಾನ್ಸ್‌ಗೆ ಸಂಬಂಧಪಟ್ಟ ವಿಷಯ ಬಂದಾಗ ಲಿಮಿಟೇಷನ್ಸ್ ಇರುತ್ತದೆ. ನಿಜ. ಆದರೆ ಅವರು ಕೇಳಿರುವುದಕ್ಕೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು.—ಅದಕ್ಕೆ ಬೇರೆ ಕಾಲಿಂಗ್ ಅಟೆನ್‌ಷನ್ ನೋಟೀಸು ಕಳುಹಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಶರಾಫ್ ಅವರು ವರ್ಗ ಆಗಿದ್ದುದು ನಿಜವೇ ಎನ್ನುವ ಬಗ್ಗೆ ಉತ್ತರ ಕೊಟ್ಟಿಲ್ಲ. ಒಂದೂವರೆ ಲಕ್ಷ ಚಿಲ್ಲರೆ ರೂಪಾಯಿ ಪಾರ್ಟೇಜ್ ಬಗ್ಗೆ ಏನಾಯಿತು ಎಂದು ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು.—ಇದರ ವಿಚಾರದಲ್ಲಿ ಜಾಸ್ತಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದಾರೆ.

SRI KAGODU THIMMAPPA.—It is a fact that there was shortage of money previously ?

ಶ್ರೀ ಡಿ ದೇವರಾಜಅರಸ್.—ಅವರನ್ನು ವರ್ಗಮಾಡಿರಬಹುದು. ಆದರೆ ಹಣ ಪೋಲು ಆಗಿದ್ದಕ್ಕೆ ಅವರು ಜವಾಬ್ದಾರರು ಎಂದು ತಾವು ಹೇಳುತ್ತಾ ಇದ್ದೀರಿ. All these factors will be taken note of and the investigation will go on. ಎಷ್ಟು ಚರ್ಚೆ ಮಾಡಿದರೂ ಹೋದ ದುಡ್ಡು ಬರುವುದಿಲ್ಲ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಬೇಕು ಎನ್ನುವುದು ತಮ್ಮ ಉದ್ದೇಶ ಎಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎರಡೂ ಗೊತ್ತಿದ್ದು ಬಿಟ್ಟರೆ ನಾವು ಏನು ಹೇಳುವುದಿಲ್ಲ.

SRI D. DEVARAJ URS.—Now that you have made a statement here we will take note of it while investigation is carried on. When such a serious case is involved the Government is equally interested if not more to come to proper conclusions to book the culprits. I am glad you have brought this point to light and we will cretainly take note of it.

(ii) re: flow of extra waters for K R S to Madras